**O.S.No. 85/2024**
**PW1**

ದಿನಾಂಕ 14.03.2025 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ವಾದಿ ಪರ ಶ್ರೀಮತಿ. ಪಿ.ಪಿ.ಎಲ್ ವಕೀಲರಿಂದಃ

ಈ ಪ್ರಕರಣದಲ್ಲಿ ನಾನು ವಾದಿಯಾಗಿದ್ದು, ನನ್ನ ಮುಖ್ಯ ವಿಚಾರಣೆ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ. ಅದರಲ್ಲಿ ಹೇಳಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ ಮತ್ತು ಅದರಲ್ಲಿರುವ ಸಹಿಗಳು ನನ್ನದೇ ಆಗಿರುತ್ತವೆ.

ಸಾಕ್ಷಿ 'ಬಿ' ಎಕ್ಸ್-ಟ್ರಾಕ್ಟ್ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ1 ಎಂದು, 1ನೇ ಪ್ರತಿವಾದಿ ನೀಡಿದ ದೂರಿನ ನಕಲನ್ನು ನಿಪಿ2 ಎಂದು, ಐ.ಎಂ.ವಿ ಕಾಯ್ದೆ ಕಲಂ 133 ರಡಿಯಲ್ಲಿ ನೀಡಿದ ನೋಟೀಸಿನ ನಕಲನ್ನು ನಿಪಿ3 ಎಂದು, ಪಿ.ಎಫ್ ನ ನಕಲನ್ನು ನಿಪಿ4 ಎಂದು, ಎ.ಆರ್.ಟಿ.ಒ ರವರ ಕಾಗದ ಪತ್ರವನ್ನು ನಿಪಿ5 ಎಂದು, ಪೆಟ್ಟಿ ಚಾರ್ಜ್ ಶೀಟನ್ನು ನಿಪಿ6 ಎಂದು, ಸಿ.ಸಿ 2151/2019 ರ ಆದೇಶದ ಹಾಳೆಯ ದೃಡೀಕೃತ ನಕಲನ್ನು ನಿಪಿ7 ಎಂದು, ಸಿ.ಸಿ 2151/2019 ರ ಆದೇಶದ ಹಾಳೆಯ ದೃಡೀಕೃತ ನಕಲನ್ನು ನಿಪಿ8 ಎಂದು, ಸಿ.ಸಿ 2151/2019 ರ ತೀರ್ಪಿನ ದೃಡೀಕೃತ ನಕಲನ್ನು ನಿಪಿ9 ಎಂದು, ಸಿ.ಸಿ 2151/2019 ರ ಮುಖ್ಯ ವಿಚಾರಣೆಯ ದೃಡೀಕೃತ ನಕಲುಗಳನ್ನು ನಿಪಿ10 ಮತ್ತು 11 ಎಂದು,ನೋಟೀಸಿನ ದೃಡೀಕೃತ ನಕಲನ್ನು ನಿಪಿ12 ಎಂದು, ಅಂಚೆ ಸ್ವೀಕೃತಿಗಳನ್ನು ನಿಪಿ13 ಮತ್ತು 14 ಎಂದು, ರಿಪ್ಲೇ ನೋಟೀಸನ್ನು ನಿಪಿ15 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ 1 ಮತ್ತು 2ನೇ ಪ್ರತಿವಾದಿಯರು ಪ್ರತಿವಾದ ಪತ್ರವನ್ನು ಸಲ್ಲಿಸದ ಕಾರಣ ಯಾವುದೇ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಬೆಳ್ತಂಗಡಿ

(ಸಾ.ಓ.ಹೇ.ಕೇ.ಸ.ಇ.ಎ.ಒ)